**ಶ್ರೀ.ಬಿ.ಎಸ್. ಯಡಿಯೂರಪ್ಪ** :- ಅಧ್ಯಕ್ಷರೇ ಒಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ.

**5. ಅಧ್ಯಕ್ಷರ ಅಪ್ಪಣೆ ಮೇರೆಗೆ**

**ವಿಷಯ:- ನಕ್ಸಲೈಟ್ಸ್ ಕಡೆಯಿಂದ ಅನಾಮಧೇಯ ಪತ್ರ ಬಂದಿರುವುದರ ಬಗ್ಗೆ**

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಉಪಾಧ್ಯಕ್ಷರೆ, ನಾನು ಮಧ್ಯಪ್ರವೇಶ ಮಾಡಬೇಕೋ ಬೇಡವೋ ಗೊತ್ತಿಲ್ಲ. ಈಗತಾನೆ ಮಧ್ಯಾಹ್ನದ ಸಮಯದಲ್ಲಿ ನಕ್ಸಲೈಟ್ಸ್ ಅವರ ಕಡೆಯಿಂದ ಒಂದು ಅನಾಮಧೇಯ ಪತ್ರ ಕೊರಿಯರ್‌ನಲ್ಲಿ ನಮ್ಮ ಮನೆಗೆ ಬಂದಿದೆ. ಇದರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಇಲ್ಲಿ ಇರುವುದರಿಂದ ಹೇಳುತ್ತಿದ್ದೇನೆ. ಇಲ್ಲಿ ನಾನು ಒಬ್ಬರು ಪತ್ರಕರ್ತರ ಹತ್ತಿರ ಹೇಳಿದೆ. ಅದನ್ನು ನಾನು ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ಆದರೆ ಅವರು, ಇಲ್ಲ, ಮಾನ್ಯ ಉಡಿಯೂರಪ್ಪನವರೆ, ಅದನ್ನು ನೀವು ಸದನದಲ್ಲಿ ಹೇಳಬೇಕು, ಇಲ್ಲದೆ ಇದ್ದರೆ ಅದು ಸರಿಯಾದ ಪದ್ಧತಿ ಅಲ್ಲವೆಂದು ಹೇಳಿದ್ದರಿಂದ ಹೇಳುತ್ತಿದ್ದೇನೆ. ನಾನಂತೂ ಆ ನರಹಂತಕ ವೀರಪ್ಪನ್ ಕಾಲದಲ್ಲೂ ಕೂಡ ಮೈಮೇಲೆ ಹಾಕಿಕೊಂಡು ಈ ರೀತಿಯಾಗಿ ಹೆದರಿಸಿ ಕೊಂಡಿದ್ದಾಯಿತು. ಆದಾದಮೇಲೆ ಕರೀಂಲಾಲ್ ಹಗರಣದಲ್ಲಿ ಕೂಡ ಎಲ್ಲಾ ರೀತಿಯ ಬೆದರಿಕೆಯಾಯಿತು. ಈಗ ನಾನೊಬ್ಬ ವಿರೋಧ ಪಕ್ಷದ ನಾಯಕನಾಗಿ ಇದು ನನ್ನ ಕರ್ತವ್ಯ ನಕ್ಸಲೈಟ್ ಹಾವಳಿ ಬಗ್ಗೆ ನನಗೆ ಏನು ಸ್ಪಷ್ಟವಾಗಿ ಗೊತ್ತಿದೆ, ನನ್ನ ಪಕ್ಷದ ನಿಲುವು ಏನಿದೆ? ಅದನ್ನು ಇಲ್ಲಿಯೂ ಹೇಳಬೇಕು, ಹೊರಗಡೆ ಕೂಡ ಹೇಳಬೇಕು ; ನಾನು ಬದುಕಿರುವವರೆಗೂ ಆ ಕೆಲಸವನ್ನು ಮಾಡಬೇಕು. ಆದರೆ ಇವತ್ತು ಮಧ್ಯಾಹ್ನದ ಸಮಯದಲ್ಲಿ ಕೊರಿಯರ್‌ನಲ್ಲಿ ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಲೆಟರ್ ಕಾಪಿಯನ್ನು ರೆಡಿಮಾಡುತ್ತಿದ್ದಾರೆ, ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತಿದ್ದೇನೆ. ಈಗಾಗಲೆ ನನ್ನ ಹಿಂದೆ ಪೋಲೀಸ್ ಬಂದೋಬಸ್ತು ಇದ್ದು, ಎಲ್ಲಾ ಓಡಾಡುತ್ತಿದ್ದಾರೆ, ರಕ್ಷಣೆ ಮಾಡುತ್ತಾರೆ. ಆದರೆ 24 ಗಂಟೆ ಯಾರೂ ಯಾರನ್ನೂ ರಕ್ಷಣೆ ಮಾಡುವುದಕ್ಕಾಗುದಿಲ್ಲ. ಆದರೆ ಎಲ್ಲೋ ಒಂದು ಕಡೆ ಒಬ್ಬ ಚುನಾಯಿತ ಶಾಸಕನಾಗಿ, ಒಂದು ಪ್ರತಿಪಕ್ಷದ ನಾಯಕನಾಗಿ ನಮಗೆ ಕರ್ತವ್ಯ ಮಾಡುವುದಕ್ಕೆ ಆಗದೆ ಇರುವಂತಹ ಹಾಗೂ ಉಸಿರು ಕಟ್ಟುವಂತಹ ಪರಿಸ್ಥಿತಿ ದನೇ ದಿನೇ ಜಾಸ್ತಿಯಾಗುತ್ತದೆ. ನಾನು ಮೊನ್ನೆ ಮಂಗಳೂರಿಗೆ ಹೋದಾಗ ಒಂದು ಕಾರ್ಯಕ್ರಮವನ್ನು ಮುಗಿಸಿದಮೇಲೆ, ನಮ್ಮ ಜೊತೆಗೆ ಬಂದಂತಹ ಎಸ್ಕಾರ್ಟ್ ಹಾಗೂ ಉಳಿದವರು ನಮ್ಮನ್ನು ಕಂಟ್ಯಾಕ್ಟ್ ಮಾಡಿ, ರಾತ್ರಿ ನೀವು ಹೋಗುತ್ತಿರುವುದರಿಂದ ಆ ರೂಟ್‌ನಲ್ಲಿ ನೀವು ಹೋಗಬಾರದು ಎಂದು ಬೇರೆ ರೂಟ್‌ನಲ್ಲಿ ಬಳಸಿಕೊಂಡು ಹೋಗಿ, ಚಿಕ್ಕಮಗಳೂರು ಮುಂದೆ ಆ ಕಡೆಯ ಭಾಗದಲ್ಲಿ ನೀವು ಬರಬಾರದು ಎಂದು ಹೇಳಿ ಶಿವಮೊಗ್ಗಕ್ಕೆ ಬೇರೆ ರೂಟ್ನಲ್ಲಿ ಕರೆದುಕೊಂಡು ಬಂದು ಬಿಟ್ಟರು. ಇದು ಒಂದು ತಿಂಗಳ ಹಿಂದೆ ನಡೆದಂತಹ ಘಟನೆ. ಈಗ ನನಗೆ ಒಂದು ಅನಾಮಧೇಯ ಪತ್ರ ಬಂದಿದೆ. ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಮಾನ್ಯ

ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿ ಇಲ್ಲಿ ಇದ್ದಾರೆ ಅದಕ್ಕೆ ಯಾವರೀತಿ ಬಂದೋಬಸ್ತು ಮಾಡಬೇಕು ಹಾಗೂ ಈ ರೀತಿ ಘಟನೆಗಳು ಮರುಕಳಿಸದಂತೆ ನಾವು ಏನು ಎಚ್ಚರ ವಹಿಸಬೇಕು? ಇದು ಕೇವಲ ಯಡಿಯೂರಪ್ಪನಿಗೆ ಅಲ್ಲ. ಇದು ಈ ಕಡೆಯ ಶಾಸಕನಿಗೆ ಇರುಬಹುದು ಅಥವಾ ಆ ಕಡೆಯ ಶಾಸಕನಿಗೆ ಇರಬಹುದು. ಯಾರು ನಾವು ನಿರ್ಭೀತಿಯಿಂದ ಮಾತನಾಡುತ್ತೇವೆ, ಅವರಿಗೆ ಈ ರೀತಿಯಲ್ಲಿ ಬೆದರಿಕೆ ಇದೆ. ಕರ್ನಾಟಕದಲ್ಲಿ ಈ ರೀತಿಯ ಉಸಿರು ಕಟ್ಟುವಂತಹ ಪರಿಸ್ಥಿತಿ ಇರಲಿಲ್ಲ. ಬಹಳ ಶಾಂತ ವಾತಾವರಣ ಇತ್ತು. ನಿರ್ಭೀತಿಯಿಂದ ಕೆಲಸ ಮಾಡುವಂತಹ ವಾತಾವರಣ ಇತ್ತು. ಈಗ ಇನ್ನು ಹೆಚ್ಚಿನ ಜವಾಬ್ದಾರಿ ನಮಗೆ ಇದೆ. ನಮಗಿಂತ ಹೆಚ್ಚಾಗಿ ಹೊರಗಡೆ ಇರುವಂತಹವರ ರಕ್ಷಣೆ ದೃಷ್ಟಿಯಿಂದ ನಾವು ಇನ್ನೂ ಬಿಗಿ ನಿಲುವನ್ನು ತೆಗೆದುಕೊಳ್ಳಬೇಕಾಗಿದೆ. ಇದನ್ನು ನಾವು ಸದನದ ಒಳಗಡೆ ಮಾತನಾಡದೆ ಬೇರೆ ಎಲ್ಲೂ ಮಾತನಾಡುವುದಕ್ಕೆ ಆಗುವುದಿಲ್ಲ. ಆದುದ್ದರಿಂದ ನಾವು ಮಾಡುತ್ತಿರುವ ಹೋರಾಟ, ನಮ್ಮ ನಿಲುವಿಲ್ಲೆ ಯಾವುದೇ ಬದಲಾವಣೆ ಇಲ್ಲ. ಇದರಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ನಾನು ಬದುಕಿರುವ ಕೊನೇ ಕ್ಷಣದವರೆಗೂ ಇದು ನನ್ನ ಕರ್ತವ್ಯ ಎಂದು ಅವತ್ತು ಮಾಡಿಕೊಂಡು ಬಂದಿದ್ದೇನೆ ಹಾಗೂ ಇವತ್ತು ಕೂಡ ನಾನು ಮುಂದುವರೆಸುತ್ತೇನೆ. ಆದರೆ ಇದು ಏಕೋ ಏನೋ ಪರಿಸ್ಥಿತಿ ಕೈಮೀರಿ ಹೋಗುತ್ತಿದೆ. ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಇರುವುದರಿಂದ ನಾನು ಹೇಳುತ್ತಿದ್ದೇನೆ. ನಾನು ಪೋಲಿಸ್ ಟಾಪ್ ಆಫೀಸರ್‌ಗೆ ವಿನಂತಿ ಮಾಡಿದೆ ಅವರು ನನಗೆ ಯಾವುದೋ ಒಂದು ಎಸ್ಕಾರ್ಟ್ ಎಂದು ಕೊಡುತ್ತಾರೆ. ಅವರು ಈಗ ಒಬ್ಬರು ಮನೆಯ ಹತ್ತಿರ ಇದ್ದಾರೆ. ಅವರು ಬೆಂಗಳೂರು ಬಾರ್ಡರ್‌ವರೆಗೆ ಬರುತ್ತಾರೆ. ನಂತರ ಮುಂದೆ ಹೋದಾಗ ಯಾರೂ ಇರುವುದಿಲ್ಲ. ಇಲ್ಲದೆ ಇದ್ದರೆ ನೀವು ಎಲ್ಲರನ್ನೂ ವಾಪಸ್ಸು ತೆಗೆದುಕೊಂಡುಬಿಡಿ ಮಾನ್ಯ ಸಿದ್ಧಿರಾಮಯ್ಯನವರೆ. ಈಗ ನಮಗೆ ಸಮಸ್ಯೆ ಏನಾಗಿದೆ ಎಂದರೆ ನಾನು ಈ ರಕ್ಷಣೆಯಲ್ಲಿ ಓಡಾಡಬೇಕೆಂದು ಹೇಳುವವನು ಅಲ್ಲವೇ ಅಲ್ಲ. ಈಗ ಹೀಗೆ ರಕ್ಷಣೆ ಕೊಟ್ಟಿರುವಂತಹ ವ್ಯವಸ್ಥೆ ಇದೆ ಎಂದು ನೀವು ತಿಳಿದುಕೊಂಡಿರುತ್ತೀರಿ. ಆದರೆ ಆ ರಕ್ಷಣಾ ವ್ಯವಸ್ಥೆಯಲ್ಲಿ ಅವರು ಬಾರ್ಡರ್‌ವರೆಗೆ ಬಂದು ಅವರು ವಾಪಸ್ಸು ಬರುತ್ತಾರೆ. ನಂತರ ಇನ್ನು ಯಾರಾದರೂ ಮುಂದುಗಡೆ ಬರಬಹುದು, ಅಥವಾ ಬರದೇ ಇರಬಹುದು. ಆಮೇಲೆ ಕೆಲವು ಕಡೆ ಯಾವುದೋ ಜೀಪಿನಲ್ಲಿ ಬರುತ್ತಾರೆ, ನಾವು 90 ರಿಂದ 100 ಕಿಲೋಮೀಟರ್ ವೇಗದಲ್ಲಿ ಹೋದರೆ, ಪಾಪ ಅವನು 75 ಕಿಲೋಮೀಟರ್ ವೇಗದಲ್ಲಿ ಹೋಗುವುದಕ್ಕೆ ಆಗದೆ ಇರುವಂತಹ ವಾಹನ ಇರುತ್ತದೆ. ಈ ರೀತಿಯ ವಿಚಿತ್ರವಾದಂತಹ, ಉಸಿರು ಕಟ್ಟುವಂತಹ ಪರಿಸ್ಥಿತಿಯಲ್ಲಿ ಇವತ್ತು ನಾವು ರಾಜಕೀಯ ಕ್ಷೇತ್ರದಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ನಾನು ಪ್ರತಿಪಕ್ಷದ ನಾಯಕನಾಗಿ ಸದನದಲ್ಲಿ ಇದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರದೇ ಇದ್ದರೆ ಅದು ಕರ್ತವ್ಯಲೋಪವಾದೀತು. ಆದುದರಿಂದ ಯಡಿಯೂರಪ್ಪನವರೆ, ಇದನ್ನು ಹಾಗೆ ಇಡುವುದು ಒಳ್ಳೆಯದಲ್ಲವೆಂದು ಈಗಾಗಲೆ ನಮ್ಮ ಪತ್ರಕರ್ತ ಸ್ನೇಹಿತರ ಹತ್ತಿರ ಪತ್ರವನ್ನು ಸ್ನೇಹಿತರ ಹತ್ತಿರ ಟೈಪ್ ಮಾಡುತ್ತಿದ್ದಾರೆ. ಅದನ್ನು ನಾನು ಮಾತನಾಡಿದಾಗ ಅವರು ಹೇಳಿದ್ದರಿಂದ ನನಗೆ ಬಂದಿರುವಂತಹ ಕವರಿಂಗ್ ಲೆಟರ್ ಹಾಕಿ

ತಮಗೆ ಕಳುಹಿಸಿಕೊಡುತ್ತೇನೆ. ಇದು ತಮ್ಮ ಗಮನದಲ್ಲಿ ಇರಲಿ ಹಾಗೂ ನಾನೇ ವೈಯುಕ್ತಿಕವಾಗಿ ತಮಗೆ ಹೇಳುತ್ತಿದ್ದೇನೆ. ಸರಿಯಾದಂತಹ ಬಂದೋಬಸ್ತು ನನಗೆ ಬೇಕು. ನಿನ್ನೆ ರಾತ್ರಿ ಅನಿವಾರ್ಯವಾಗಿ ನಾನು ಹೊನ್ನಾಳಿಯಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ರಾತ್ರಿ 11.00 ಘಂಟೆಗೆ ಹೊರಟು ರಾತ್ರಿ 3.00 ಘಂಟೆಗೆ ಬೆಂಗಳೂರಿಗೆ ಬಂದು ತಲುಪಿದೆ. ಕೆಲವು ಸಾರಿ ಇವೆಲ್ಲಾ ಅನಿವಾರ್ಯವಾದಂತಹ ಪ್ರಸಂಗಗಳು ಬರುತ್ತವೆ. ಆದುದರಿಂದ ಸರ್ಕಾರದ ಗಮನಕ್ಕೆ ನಾನು ತಮ್ಮ ಮೂಲಕ ತರುವಂತಾದ್ದು ನನ್ನ ಕರ್ತವ್ಯ ಎಂದು ತಿಳಿದುಕೊಂಡು ಹೇಳುತ್ತಿದ್ದೇನೆ. ಬಂದಿರುವಂತಹ ಪತ್ರದ ಕಾಪಿಯನ್ನು ನಿಮಗೆ ಹಾಗೂ ಅವರಿಗೆ ಇಬ್ಬರಿಗೂ ಕಳುಹಿಸಿಕೊಡುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ** :– ಮಾನ್ಯ ಉಪಾಧ್ಯಕ್ಷರೆ, ಇವತ್ತು ನಾವು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಗುತ್ತದೆ. ಇದು ಬಹಳ ಕರ್ನಾಟಕ ರಾಜ್ಯದಲ್ಲಿ ಮೇರೆ ಮೀರಿ ಹೋಗಿದೆ. ನಾವು ಸಾಕಷ್ಟು ಒತ್ತಾಯ ತಂದೆವು, ಏನೋ ಬಿ.ಜೆ.ಪಿ ಯವರಿಗೋಸ್ಕರ ಇನೇನೋ ಎನ್ನುವ ದೃಷ್ಟಿಯಿಂದ ತೆಗೆದುಕೊಂಡರೋ ಏನೋ ಗೊತ್ತಾಗಲಿಲ್ಲ. ನಮ್ಮ ಪಶ್ಚಿಮ ಘಟ್ಟದ ಸಾಲುಗಳಲ್ಲಿ ಇದೊಂದು ದೊಡ್ಡ ಪೀಡೆ ನಿರ್ಮಾಣವಾಗಿದೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ರೀತಿ ಪತ್ರವನು ಬರೆಯುತ್ತಾರೆ, ಹಾಗೆಯೇ ಮಾನ್ಯ ಸುನಿಲ್ ಕುಮಾರ್ ಅವರಿಗೆ ಇವತ್ತು ಜೀವನದಲ್ಲಿ ಭದ್ರತೆ ಇಲ್ಲ. ಇನ್ನು ಮಾನ್ಯ ಹಾಲಾಡಿ ಶ್ರೀನಿವಾಸಶೆಟ್ಟರು ಅವರ ಬಗ್ಗೆ ಎಲ್ಲಾ ಬಸ್ ಸ್ಟಾಪ್‌ಗಳಲ್ಲಿ ಗೋಡೆಗಳ ಮೇಲೆ ಬರಹ ಅಂಟಿಸಿದ್ದಾರೆ. ಅವರ ಕ್ಷೇತ್ರದಲ್ಲಿ ಹೋಗಿ ನೋಡಿದರೆ ರೆಡ್ ಇಂಕ್‌ನಲ್ಲಿ ಬಸ್ ಸ್ಟಾಪ್‌ಗಳಲ್ಲಿ ಬರೆದಿದ್ದಾರೆ. ಅಲ್ಲಿ ' ನಿನ್ನ ಆಸ್ತಿ ಹಂಚಿಕೆ ಮಾಡಿಕೊಡು, ಇಲ್ಲದೆ ಇದ್ದರೆ ನಿನ್ನ ಜೀವ ಮುಗಿಸುತ್ತೇವೆ. ಎಂದು ಇದೆ ಪ್ರತಿನಿತ್ಯ ಅವರ ಕ್ಷೇತ್ರದಲ್ಲಿ ಅವರು ಹಗಲು ಹೊತ್ತಿನಲ್ಲಿ ಬಂದೂಕುಗಳನ್ನು ಇಟ್ಟುಕೊಂಡು ಓಡಾಡುತ್ತಿದ್ದಾರೆ. ಅಲ್ಲಿ ಸರ್ಕಾರ ಸತ್ತುಹೋಗಿದೆ, ಸರ್ಕಾರ ಬದುಕಿಲ್ಲ. ಪೋಲಿಸ್ ಇಲಾಖೆ ಸತ್ತುಹೋಗಿದೆ. ಅಲ್ಲಿ ಸರಿಯಾದಂತಹ ಅಧಿಕಾರಿಗಳನ್ನು ಹಾಕುವಂತಹ ಪರಿಸ್ಥಿತಿಯಲ್ಲಿ ಯಾವ ಕಾರಣಕ್ಕಾಗಿಯೂ ರಾಜ್ಯಸರ್ಕಾರ ಇಲ್ಲ, ಯಾರ ಒತ್ತಡಕ್ಕೆ ರಾಜ್ಯಸರ್ಕಾರ ಮಣಿದಿದೆ ಎನ್ನುವ ವಿಚಾರ ನನಗೆ ಗೊತ್ತಾಗುತ್ತಿಲ್ಲ. ಕೇಂದ್ರದಿಂದ ಏನಾದರೂ ಇನ್‌ಸ್ಟ್ರಕ್ಷನ್ಸ್ ಬರುತ್ತಿದೆಯಾ ಹೇಗೆ? ಏಕೆಂದರೆ ಇಲ್ಲಿ ಸಮ್ಮಿಶ್ರ ಸರ್ಕಾರ ಇದೆ ಎನ್ನುವ ದೃಷ್ಟಿಯಿಂದ ಏನಾದರೂ ಬರುತ್ತಿದೆಯೋ? ಅಥವಾ ಯಾವ ಕಾರಣಕ್ಕಾಗಿ ಎಂದು ಹೇಳಿ. ಸ್ವಾಮಿ, ನೂರರಿಂದ ನೂರೈವತ್ತು ಜನ ಬಂದೂಕು ಇಟ್ಟುಕೊಂಡು ಬಾಂಬ್ ಇಟ್ಟುಕೊಂಡು, ವಿದೇಶಿ ನಿರ್ಮಿತ ವೆಪನ್‌ಗಳನ್ನು ತೆಗೆದುಕೊಂಡು ಕಾಡಿನೊಳಗೆ ಇದ್ದಾರೆ ಎಂದರೆ ಇದು ಒಂದು ಸರ್ಕಾರಕ್ಕೆ ಹೆಚ್ಚೇ? ಹೇಳಿ. ನಾಳೆ ಜನರಿಗೆ ಏನು ಮೆಸೇಜ್ ಹೋಗುತ್ತದೆ. ಅನೇಕ ನಿರುದ್ಯೋಗಿ ಯುವಕ ಯುವತಿಯರು ಇದ್ದಾರೆ. ಅವರೆಲ್ಲರೂ ಬಂದಕೂಗಳನ್ನು ತೆಗೆದುಕೊಂಡು ಹೋಗುವುದು, ಹಳ್ಳಿಗಳಲ್ಲಿ ಯಾರಿಗೋ ಕುತ್ತಿಗೆಗೆ ಬಂದೂಕುಗಳನ್ನು ಹಿಡಿಯುವುದು, ' ಹತ್ತು ಸಾವಿರ, ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡಿ' ಎಂದು ಅವರನ್ನು ಕೇಳುವುದು. ಆದರೆ ನಿಮ್ಮ ಸರ್ಕಾರವನ್ನು ಯಾರು ನಂಬಿಕೊಂಡೇ ಇಲ್ಲ. ನಿಮ್ಮ ಪೋಲೀಸ್ ಕಾನ್‌ಸ್ಟೇಬಲ್ ಅನ್ನು ಹೊತ್ತುಕೊಂಡು ಹೋದ ದಿವಸವೇ, ಶೃಂಗೇರಿ ತಾಲ್ಲೂಕಿನ ಬಹಳಷ್ಟು ಜನ

ರೈತರು ದಿಗ್ಭ್ರಾಂತರಾಗಿದ್ದಾರೆ. ಇದರ ಬಗ್ಗೆ ನಮ್ಮ ಸ್ನೇಹಿತರು ಇದ್ದಾರೆ. ಅವರು ಬಂದಾಗ 10 ಸಾವಿರ, 20ಸಾವಿರ ಕೇಳಿದ ಬಗ್ಗೆ ಅವರು ಹೇಳುತ್ತಾರೆ. ಮಾನ್ಯ ಸಿದ್ದರಾಮಯ್ಯನವರೇ ಅವರು ಇದನ್ನು ನನಗೆ ಹೇಳಿದ್ದಾರೆ. ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ' ಅವರು ಕೇಳಿದಷ್ಟು ಹಣವನ್ನು ಕೊಡುತ್ತೇವೆ. ನಮ್ಮನ್ನು ಅವರು ಒಂದು ಲಕ್ಷ ರೂಪಾಯಿಗಳನ್ನು ಕೇಳಿದರೆ, ನಮ್ಮ ಹತ್ತಿರ ಹತ್ತು ಸಾವಿರ ರೂಪಾಯಿ ಇದೆಯೆಂದರೆ ಅವರು ಅದನ್ನು ಮಾನವೀಯತೆಯಿಂದ ತೆಗೆದುಕೊಂಡು ಹೋಗುತ್ತಾರಂತೆ. ನಮಗೆ ಏನು ತೊಂದರೆ ಇಲ್ಲವೆಂದು ಹೇಳುವಂತಹ ಪರಿಸ್ಥಿತಿ ಇವತ್ತು ಇದೆ. ಹಾಗಾಗಿ ನಿಮ್ಮ ಸರ್ಕಾರದಿಂದ ನಿಮ್ಮ ಮೆಸೇಜ್ ಏನು? ಕನಿಷ್ಟ ಅದನ್ನು ಹೇಳಿ. ನಮ್ಮ ಜನರು ಎಲ್ಲರ ಹಾಗೆ ಹಪ್ತ ಕೊಟ್ಟು ಕೊಂಡು ಬದುಕೋಣೋವೆ? ಒಂದಷ್ಟು ಜನರು ಮತ್ತೆ ಮತ್ತೆ ಅಲ್ಲಿಗೆ ಹೋಗಿ ಸಾವಿರಾರು ಜನರು ಇರುವ ಹಾಗೆ ಪರಿಸ್ಥಿತಿ ನಿರ್ಮಾಣವಾಗಲಿಲ್ಲವಾ? ಏಕೆಂದರೆ ಅವರಿಗೆ ಇಲ್ಲಿ ಉದ್ಯೋಗ ಇಲ್ಲ ಹಾಗಾಗಿ ಎಲ್ಲರೂ ಕೂಡ ಅಲ್ಲಿ ಹೋಗಿ ಸೇರಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇವತ್ತು ಯುವಕ, ಯುವತಿಯರೆಲ್ಲರೂ ಅಲ್ಲಿ ಹೋಗಿ ಸೇರಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಮೊಳಕೆಯಲ್ಲೆ ಚಿವುಟಿ ಹಾಕಿಯೆಂದು ಸರ್ಕಾರಕ್ಕೆ ನಾವು ಹೇಳಿದವು. ನಮ್ಮ ಪೊಲೀಸರ ನೈತಿಕ ಸ್ಥೈರ್ಯವನ್ನು ಹಾಳು ಮಾಡಿದ್ದೀರಿ. ಇಲ್ಲಿ ಬಹಳಷ್ಟು ಜನ ಪತ್ರಕರ್ತರು, ಕೆಲವು ಪ್ರೊಫೆಸರ್‌ಗಳು ಇದ್ದಾರೆ ಇವರು ಮನಸ್ಸಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ ಹಣ ಕೊಡಿ ನಾವು ಪೊಲೀಸರ ವಿರುದ್ದ ಮೆರವಣಿಗೆ ಮಾಡುತ್ತೇವೆಂದು ಹೇಳುವಂಥವರು ಇದ್ದಾರೆ. ಇವರು ಏನು ಮೆರವಣಿಗೆಯನ್ನು ಮಾಡುತ್ತಾರೆ? ಯಾರಿಗಾಗಿ ಮೆರವಣಿಗೆಯನ್ನು ಮಾಡುತ್ತಾರೆ. ಈ ರೀತಿ ಬಂದೂಕುಗಳನ್ನು ಹಿಡಿದುಕೊಂಡು ಮನುಕುಲವನ್ನು ನಾಶಮಾಡುವಂಥವರು ಇವತ್ತು ಮೆರವಣಿಗೆ ಮಾಡುತ್ತಾರೆ, ವೈಭವೀಕರಣ ಮಾಡುತ್ತಾರೆ. ನಮ್ಮ ಅನೇಕ ಮಾಧ್ಯಮಗಳಲ್ಲೂ ಅವರ ಬಗ್ಗೆ ವೈಭವಿಕರಣವಾಯಿತು. ಅವರು ಬುದ್ದಿವಂತರು, ಬುದ್ಧಿಜೀವಿಗಳು, ಅವರ ಮನೆ ಹಾಗೆ, ಹೀಗೆ, ಅವರು ಮೊದಲೇ ಬಹಳ ದೊಡ್ಡ ಮೇಧಾವಿಗಳು ಎಂದು ಈ ರೀತಿಯ ವೈಭವೀಕರಣದಿಂದ ಬಹಳಷ್ಟು ಜನ ಯುವಕರಿಗೆ ಪ್ರಚೋದನೆ ಸಿಗುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಯಿತು. ನಾನು ಹೇಳುವಂಥಾದ್ದೆನೆಂದರೆ ಈ ರೀತಿಯಾಗಿ ವೈಭವೀಕರಣ ಮಾಡುವಂತಹ ನಮ್ಮ ಮಾಧ್ಯಮ ಮಿತ್ರರಾಗಲಿ ಇವತ್ತು ಸ್ವಯಂ ಘೋಷಿತ ಬುದ್ಧಿಜೀವಿಗಳಾಗಲಿ, ನೀವು ಬಂದು ಪಶ್ಚಿಮ ಘಟ್ಟದ ಸಾಲುಗಳಲ್ಲಿ ಇರಿ. ನಾವು ಅಲ್ಲಿ ನಮ್ಮ ಮನೆಗಳನ್ನು ಬಿಟ್ಟು ಬರುತ್ತೇವೆ. ನೀವು ಆ ಮನೆಗಳಲ್ಲಿ ವಾಸ ಮಾಡಿ. ನಿಮ್ಮ ಮನೆಗಳನ್ನು, ನಿಮ್ಮ ಆಸ್ತಿಗಳನ್ನು ನಮಗೆ ಬಿಟ್ಟು ಕೊಡಿ, ನಮ್ಮ ಆಸ್ತಿ, ನಮ್ಮ ಮನೆಗಳನ್ನು ನಾವು ನಿಮಗೆ ಬಿಟ್ಟು ಕೊಡುತ್ತೇವೆ. ಅಲ್ಲಿ ನೀವು ಬಂದು ದಕ್ಷಿಣ ಕನ್ನಡದ ಆ ಬಾರ್ಡರ್‌ಗಳಲ್ಲೊ, ಅಥವಾ ತೀರ್ಥಹಳ್ಳಿ, ಆಗುಂಬೆ, ಶೃಂಗೇರಿ, ಚಿಕ್ಕಮಗಳೂರು, ಭಾಗಗಳಿಗೆ ಬನ್ನಿ. ಇದಕ್ಕೆ ಏನು ಅರ್ಥ ಇದೆ ಸ್ವಾಮಿ? ಒಬ್ಬ ಶಾಸಕನಿಗೆ ಜೀವ ಬೆದರಿಕೆ ಬರುತ್ತದೆ, ಒಬ್ಬ ಮಾನ್ಯ ವಿರೋಧಪಕ್ಷದ ನಾಯಕರಿಗೆ ಜೀವ ಬೆದರಿಕೆಬರುತ್ತದೆ. ಅಲ್ಲಿ ಜನ ಪ್ರತಿನಿಧಿಗಳು ಬದುಕುವ ಹಾಗೆ ಇಲ್ಲ ಇನ್ನು ನಾಳೆ ಅವರೇ ಚುನಾವಣೆ ಮಾಡುತ್ತಾರೆ. ಆಂಧ್ರಪ್ರದೇಶದಲ್ಲಿ ಏನು ಆಗಿದೆ? ಅಲ್ಲಿ ರಕ್ತದ ಓಕುಳಿಯಾಗಿದೆ ಕೆಲವು

ಜಿಲ್ಲೆಗಳಲ್ಲಿ ಸರ್ಕಾರ ಇದೆ, ತೆಲಂಗಾಣ ಭಾಗದ ಜಿಲ್ಲೆಗಳಲಿ, ಅಲ್ಲಿ ಸರ್ಕಾರ ನಡೆಸುವುದಕ್ಕೆ ಆಗುತ್ತಿದೆಯಾ?. ಅಲಿ ಅವರೇ ಕಂದಾಯ ವಸೂಲಿ, ತೆರಿಗೆ ವಸೂಲಿ ಮಾಡುತ್ತಾರೆ. ಅಲ್ಲಿಗೆ, ಯಾರು ಹೋಗುವುದಿಲ್ಲ. ನಿಮ್ಮ ಅರಣ್ಯ ಇಲಾಖೆ, ಇದೊಂದು ಇಲಾಖೆನಾ? ಇದನ್ನು ಏನಾದರೂ ಮಾಡಿ ಮುಗಿಸಿ, ಇದು ಬೇಡ. ಹಳ್ಳಿಗಳಿಗೆ ರಸ್ತೆಗಳನ್ನು ಮಾಡುವ ಹಾಗೆ ಇಲ್ಲ, ಕರೆಂಟ್ ತೆಗೆದುಕೊಂಡು ಹೋಗುವ ಹಾಗೆ ಇಲ್ಲ. ಏಕೆಂದರೆ ಇವರ ನಿಬಂಧನೆಗಳು ಇದೆಯಂತೆ ಇದಕ್ಕೆ ಸುಪ್ರೀಂಕೋರ್ಟ್‌ನ ಆದೇಶ ಇದೆ ಎಂದು ಹೇಳುತ್ತಾರೆ. ಇವತ್ತು ಬಂದೂಕು ತೆಗೆದುಕೊಂಡು ಇರುವಂಥವರ ಹಳ್ಳಿಗಳಿಗೆ ಇವರು ಹೋಗುವುದಿಲ್ಲ, ಇವರ ಡಿಎಫ್‌ಒಗಳು ಹೋಗುವುದಿಲ್ಲವಲ್ಲಾ. ಮಾನ್ಯ ಉಪಮುಖ್ಯಮಂತ್ರಿಯವರೇ, ತಾವು ಸದನದಲ್ಲಿ ಇದ್ದೀರಿ. ಇವತ್ತು ಗೃಹಸಚಿವರಾಗಿತಕ್ಕಂಥ ಮುಖ್ಯಮಂತ್ರಿಯವರು ಸದನದಲ್ಲಿ ಇಲ್ಲ. ಇದರ ಬಗ್ಗೆ ಸರ್ಕಾರ ಕುಳಿತುಕೊಂಡು ಗಂಭೀರವಾಗಿ ಅಲೋಚನೆ ಮಾಡದೇ ಹೋದರೆ, ಸರಿಯಾಗುವುದಿಲ್ಲ. ನೀವು ಜನರನ್ನು ಕೇಳಿ, ನಮ್ಮ ಊರಿನಲ್ಲೆಲ್ಲಾ ಮಂಗಗಳನ್ನು ಹೊಡೆಯುವಂತಹ ಬಂದೂಕು ನಮ್ಮ ಹತ್ತಿರ ಇದೆ. ಅವರನ್ನು ಕೊಂದು ಹಾಕಿದರೆ, ನಿಮ್ಮ ಮೇಲೆ ಏನೂ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ ನೀವು ಮಾಡಿಯೆಂದು ಅವರಿಗೆ ಹೇಳಿ. ನಾವು ಮಾಡುತ್ತೇವೆ. ನಿಮ್ಮ ಪೊಲೀಸ್‌ನವರು ಬೇಡ. ನೀವು ನಿಮ್ಮ ಪೊಲೀಸ್‌ನವರನ್ನು ಕಳುಹಿಸುವುದು ಬೇಡ. ನೀವು ಆ ರೀತಿ ಆಶ್ವಾಸನೆಯನ್ನು ಕೊಡಿ. ಜನರಿಗೆ ನೀವು ಧೈರ್ಯವನ್ನು ಕೊಡಿ. ಇದನ್ನು ನೀವು ದಯವಿಟ್ಟು ಮಾಡದೇ ಹೋದರೆ, ತುಂಬಾ ತೊಂದರೆಯಾಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಈಗ ಸದನದಲ್ಲಿ ಒಮದು ಹೇಳಿಕೆಯನ್ನು ಏನು ಕೊಟ್ಟಿದ್ದಾರೆ, ದಯವಿಟ್ಟು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ವಿಶೇಷವಾದಂತಹ ಸ್ಕ್ವಾಡ್‌ಗಳನ್ನು ಕಳುಹಿಸುತ್ತೇವೆಂದು ಹೇಳಿದಿರಿ, ಇವತ್ತು ಅದು ಇಲ್ಲ. ಇದು ಯಾವ ಕಾರಣಕ್ಕಾಗಿ ಇಲ್ಲವೆಂಬುದನ್ನು ನೀವು ಹೇಳಬೇಕಾಗುತ್ತದೆ.

**6. ವಿತ್ತೀಯ ಕಾರ್ಯಕಲಾಪ.**

**2005-06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮೂಂದುವರೆದ ಸಾಮಾನ್ಯ ಚರ್ಚೆ**

**ಶ್ರೀ ವಾಟಾಳ್ ನಾಗರಾಜ್ (ಮುಂದುವರೆದುದ್ದು):** ಮಾನ್ಯ ಉಪಾಧ್ಯಕ್ಷರೇ, ನಾನು ಸಾಮಾನ್ಯ ಚರ್ಚೆ ಆಗಲೇ ಈ ಮಾದ್ಯಮಗಳ ಬಗ್ಗೆ ಮಾತನಾಡುತ್ತಿದ್ದೆ ಈ ಮಾಧ್ಯಮಗಳ ಅನೇಕ ಬೇಡಿಕೆಯಿದ್ದು ಇವರು ಅನೇಕ ಸಭೆಗಳನ್ನು ಮಾಡಿ, ಸರ್ಕಾರಕ್ಕೆ ಅನೇಕ ಬೇಡಿಕೆಗಳನ್ನು ಮಂಡಿಸಿದ್ದಾರೆ. ಆ ಬೇಡಿಕೆಗಳ ಬಗ್ಗೆ ಪ್ರಾಮಾಣಿಕವಾದ ಚಿಂತನೆಯನ್ನು ಮಾಡತಕ್ಕಂಥಾದ್ದು, ಮತ್ತೆ ಕಾರ್ಯನಿರತ ಪತ್ರಕರ್ತರ ಸಂಘ, ಹೊಸದಾಗಿ ಒಂದು ಕಟ್ಟಡವನ್ನು ಕಟ್ಟಬೇಕಾದಂಥಾದ್ದರ ಬಗ್ಗೆ ಈಗಾಗಲೇ ಅನೇಕ ಸಾರಿ ಬೇಡಿಕೆಯನ್ನು ಇಟ್ಟಿದ್ದಾರೆ. ಈ ಬೇಡಿಕೆಯನ್ನು ಈಡೇರಿಸುವಂಥಾದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಮಾನ್ಯ ಉಪಮುಖ್ಯಮಂತ್ರಿಯವರು ಮನಸ್ಸುಮಾಡಿ ತಕ್ಷಣ ಪ್ರಾಮಾಣಿಕವಾಗಿ ಅವರನ್ನು ಯಾವಾಗ ಮಾತನಾಡಲು ಕರೆಯುತ್ತೀರಿ? ಎಂದು